**ಪಿಡಬ್ಲೂಃ** *01*

**ಇಂದು ದಿಃ06.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.**

**ದಾಖಲಾತಿಯನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ.ಕೆ.ಬಿ.ಎಸ್. ವಕೀಲರಿಂದಃ**

| | |
|---|---|
| **Ex.P-7** | Final in patient bill for Rs.1,30,940/- |
| **Ex.P-8** | Notarized copy of my Aadhar card (Original Aadhar card produced, compared with xerox copy, found correct and returned to witness |

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಸಿ.ವಿ.ಎಸ್. ವಕೀಲರಿಂದಃ**

ನಾನು ಬಿಕಾಂ ಓದಿದ್ದೇನೆ. 6-7 ವರ್ಷದ ಹಿಂದೆ ನನ್ನ ವಿದ್ಯಾಭ್ಯಾಸ ಮುಗಿದಿದೆ. ನಾನು ರೂ.30,000 ರೂ ಸಂಪಾದನೆ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಇದೆ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಅಪಘಾತವಾದ ನಾನು ಓಡಿಸುತ್ತಿದ್ದ ಬೈಕ್ ನನ್ನದೆ. ಆ ಬೈಕ್ ನನ್ನ ಹೆಸರಿನಲ್ಲಿದೆ ಎಂದು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅಪಘಾತವಾದ ದಿನ ನಮ್ಮ ಊರಿನಿಂದ ನಮ್ಮ ಅತ್ತೆಯ ಹೊಲಕ್ಕೆ ಹೋಗುತ್ತಿದ್ದೆ. ಆ ದಿನ ನಾನು ಹೆಲ್ಮೆಟ್ ಧರಿಸಿದ್ದೆ. ಪೊಲೀಸರು ನನ್ನ ವಾಹನವನ್ನು ಅಮಾನತ್ತುಪಡಿಸುವ ಕಾಲಕ್ಕೆ ನನ್ನ ಹೆಲ್ಮೆಟ್ ಅಮಾನತ್ತುಪಡಿಸಿರುವ ಬಗ್ಗೆ ನಮೂದಿಸಿರುತ್ತಾರೆ. ಬೈಕ್ ಚಾಲನೆ ಮಾಡಲು ನನಗೆ ಪರವಾನಗಿ ಇದೆ. ಅದನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಆಪಾದಿತ ವಾಹನ ಬೇರೆ ರಾಜ್ಯಕ್ಕೆ ಸೇರಿದೆ ಎಂದರೆ ಸರಿ. ಅಪಘಾತವಾದ ಜಾಗ ನಮ್ಮ ಊರಿನ ಸುತ್ತಮುತ್ತ ಇದೆ ಎಂದರೆ ಸರಿ. ಅಪಘಾತವಾಯಿತು ಎಂದು ಹೇಳಲಾದ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ನಾನು ಸರ್ವಿಸ್ ರೋಡ್ ನಲ್ಲಿ ಬರುತ್ತಿದ್ದೆ ಎಂದರೆ ಸರಿ. ಸಂಪರ್ಕ ರಸ್ತೆಯಿಂದ ಹೆದ್ದಾರಿಗೆ ಪ್ರವೇಶಿಸುವಾಗ ಎಡ ಬಲ ನೋಡಿಕೊಂಡು ಹೋಗಬೇಕು ಎಂದರೆ ಸರಿ. ಸ್ಕೆಚ್ ಪ್ರಕಾರ ಫುಟ್ ಪಾತ್ ನಿಂದ 4 ಅಡಿ ಆಚೆ ಅಪಘಾತವಾಗಿದೆ ಎಂದರೆ ಸರಿ. ಅಪಘಾತವಾದ ರಸ್ತೆಯಲ್ಲಿ ಡಿವೈಡರ್ ಇರುವುದಿಲ್ಲ. ಆ ದಿನ ನಾನು ಏಕಾಏಕಿ ಮುಂದೆ ಪಾಸ್ ಆಗಿದ್ದೇನೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವವರೆಗೆ ಸಂಪರ್ಕ ರಸ್ತೆಯಿಂದ ಬರುವವರು ಕಾಣಿಸುವುದಿಲ್ಲ ಎಂದರೆ ನಾನು ವಾಹನವನ್ನು ನಿಲ್ಲಿಸಿದ್ದೆ ಬೇರೊಂದು ವಾಹನವನ್ನು over take ಮಾಡುವ ಬರದಲ್ಲಿ ನನಗೆ

ಅಪಘಾತಪಡಿಸಿದೆ. ನನ್ನ ಅಜಾಗರೂಕತೆಯಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ ಪ್ರಕಾರ ವ್ಯವಸಾಯ ಮತ್ತು ಕೂಲಿ ಮಾಡುತ್ತಿರುವುದಾಗಿ ಬರೆಸಿದ್ದೇನೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸಮಯದಲ್ಲಿ ಮೂರು ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ತೋರಿಸಲು ದಾಖಲೆ ಇದೆ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ಅರ್ಜಿಯಲ್ಲಿ ಖರ್ಚು ಮಾಡಿದ್ದೇನೆಂದು ಹೇಳಲಾದ ಮೊತ್ತ ಆಧಾರ ರಹಿತವಾಗಿ ಹೇಳಿದ್ದೇನೆ ಎಂದರೆ ಸರಿ. ನನಗೆ ಯಾವುದೇ ಗಾಯಗಳಾಗಿಲ್ಲದಿದ್ದರೂ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಹಲವಾರು ಶಸ್ತ್ರ ಚಿಕಿತ್ಸೆಯಾಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. 1 ನೇ ಎದುರುದಾರರ ನಿರ್ಲಕ್ಷ್ಯತೆಯಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಪೊಲೀಸ ಮತ್ತು ವೈದ್ಯರೊಡನೆ ಸೇರಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**